ಪಿ.ಡಬ್ಲ್ಯೂ –3

ದಿನಾಂಕಃ **17.12.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಸಿ.ಸಿ.ಎಲ್ ಅರ್ಜಿದಾರರ ಪರ ವಕೀಲರಿಂದ**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಹೆಚ್.ಕೆ.ಆರ್ ವಕೀಲರಿಂದ**

ನಾನು ಲಕ್ಷ್ಮಯ್ಯ ರವರ ಮಗ ಶೇಖರ್ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಬಹುದು. ನಾನು ಮೋಟಾರ್ ಸೈಕಲ್ ಚಾಲನೆ ಮಾಡಿಕೊಂಡು ಬರುವಾಗ ಅದಲ್ಲಿ 3 ಜನರು ಇದ್ದೆವು. ಅವರಲ್ಲಿ ನಾನು, ರೇಖಾ ಮತ್ತು ರತ್ನಮ್ಮ ಇರುತ್ತೇವೆ. ನಾವೆಲ್ಲರೂ ಒಂದೇ ಕಡೆ ಕೆಲಸ ಮಾಡುತ್ತೇವೆ ಎಂದರೆ ಸರಿ. ಪ್ರತಿ ದಿನ ನಾವೆಲ್ಲರೂ ಒಟ್ಟಿಗೆ ಹೋಗಿ ವಾಪಸ್ ಬರುವುದಾ ಎಂಬ ಪ್ರಶ್ನೆಗೆ ಸಾಕ್ಷಿಯು ಆ ದಿನ ಫ್ಯಾಕ್ಟರಿ ಬಸ್ ಇಲ್ಲದ ಕಾರಣ ಮೋಟಾರ್ ಸೈಕಲ್ ನಲ್ಲಿ ಹೋಗಿರುತ್ತೇವೆ. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 3 ಜನರಲ್ಲಿ ನಾನು ಹೆಲ್ಮೆಟ್ ಹಾಕಿದ್ದೆ. ಇನ್ನಿಬ್ಬರು ಹಾಕಿರಲಿಲ್ಲ. ಕಾನೂನಿನ ಪ್ರಕಾರ ಮೋಟಾರ್ ಸೈಕಲ್ ನಲ್ಲಿ ನಿಗಧಿತ ವ್ಯಕ್ತಿಗಳಿಗಿಂತ ಹೆಚ್ಚಾಗಿ ಹೋಗುವುದು ಮತ್ತು ಹೆಲ್ಮೆಟ್ ಧರಿಸದೇ ಹೋಗುವುದು ತಪ್ಪು ಎಂದು ನನಗೆ ಗೊತ್ತಿರುತ್ತದೆ. ನನ್ನ ಮೋಟಾರ್ ಸೈಕಲ್ ನ ಡಿ.ಎಲ್. ಆರ್.ಸಿ. ಮತ್ತು ವಿಮೆಯನ್ನು ಹಾಜರು ಪಡಿಸಬಹುದು. ಈ ಅಪಘಾತವಾಗಿರುವುದು ದಾಬಸ್ ಪೇಟೆ-ಶಿವಗಂಗೆ ರಸ್ತೆಯಲ್ಲಿ. ದಾಬಸ್ ಪೇಟೆ-ಶಿವಗಂಗೆ ರಸ್ತೆಯ ಮಧ್ಯ ಭಾಗದಲ್ಲಿ

ಡಿವೈಡರ್ ಇಲ್ಲಾ ಎಂದರೆ ಸರಿ. ಈ ಅಪಘಾತ ಮುಖಾಮುಖಿ ಆಗಿರುತ್ತದೆ ಎಂದರೆ ಸರಿ. ದಾಬಸ್ ಪೇಟೆ ಯಿಂದ ಹೊನ್ನೇನಹಳ್ಳಿಗೆ ಬರುವ ರಸ್ತೆಯ ಎರುಡಾ ಭಾಗಗಳಲ್ಲಿ ಹಂಪ್ ಗಳು ಇರುತ್ತವೆ ಎಂದರೆ ಸರಿ. ಆ ರಸ್ತೆಯಲ್ಲಿ ಸಂಜೆಯ ಸವಯದಲ್ಲಿ ಹಲವಾರು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಹಾಗೆಯೇ ಹೊನ್ನೇನಹಳ್ಳಿ ರಸ್ತೆಯಲ್ಲಿ ಸಾರ್ವಜನಿಕರೂ ಸಹ ರಸ್ತೆಯನ್ನು ದಾಟುತ್ತಿರುತ್ತಾರೆ ಎಂದರೆ ಸರಿ. ಆದ್ದರಿಂದ ಆ ರಸ್ತೆಯಲ್ಲಿ ಎಲ್ಲಾ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿ. ಇನ್ನೊಂದು ಮೋಟಾರ್ ಸೈಕಲ್ ನಲ್ಲಿ ಇಬ್ಬರು ಇದ್ದರು. ಅವರುಗಳಿಗೆ ಗಾಯಗಳು ಆಗಿತ್ತು. ಅವರು ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನನಗೆ ತಲೆ ಮತ್ತು ಕಾಲಿಗೆ ಗಾಯಗಳಾಗಿರುತ್ತದೆ. ನಾನು ವಿ.ಕೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಎರಡೂ ದ್ವಿಚಕ್ರ ವಾಹನಗಳ ನಡುವೆ ಅಪಘಾತವಾಗಿದೆ ಎಂದು ಹೇಳಿರುತ್ತೇನೆ. ಎಂ.ಎಲ್.ಸಿ. extract ಅನ್ನು ಹಾಜರುಪಡಿಸಬಹುದು. ಪೋಲಿಸರು ಹಾಕಿರುವ ನಕ್ಷೆಯನ್ನು ನೋಡಿರುತೆತೀನೆ ಅದನ್ನು ಹಾಜರುಪಡಿಸಬಹುದು. ಈ ಅಪಘಾತ ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಂಪ್ಸ್ ಅನ್ನು ತಡೆಯಲು ತಕ್ಷಣದಲ್ಲಿ ಬ್ರೇಕ್ ಹಾಕಿದ್ದು ನನ್ನ ಹಿಂದೆ ಕುಳಿತಿದ್ದ ಇಬ್ಬರು ಬಿದ್ದು ಗಾಯಗೊಂಡಿರುತ್ತಾರೆ ಎಂದರೆ ಸರಿಯಲ್ಲ, ಆದ್ದರಿಂದ ನಾನು ಕೆಳಗಡೆ ಬಿದ್ದಿಲ್ಲ ಗಾಯವಾಗಿಲ್ಲ ಹಾಗೂ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಸಂಬಂಧಪಟ್ಟಂತೆ ಯಾವುದೇ

ದಾಖಲೆಗಳು ಇಲ್ಲದ ಕಾರಣ ಗಾಯಳುವಿಗೆ ಪರಿಹಾರ ಕೊಡಿಸಬೇಕೆಂದು ಎದುರುದಾರ ವಾಹನದ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮೋಟಾರ್ ಸೈಕಲ್ ನಲ್ಲಿ 3 ಜನರನ್ನು ಕರೆದುಕೊಂಡು ಮತ್ತು ಹೆಲ್ಮೆಟ್ ಹಾಕದೇ ಚಾಲನೆ ಮಾಡುತ್ತಿದ್ದರಿಂದ ನನ್ನ ಅಜಾಗರೂಕತೆಯಿಂದ ಈ ಅಪಘಾತವಾಗಿರುವುದರಿಂದ ನಾನೇ ಅರ್ಜಿದಾರರಿಗೆ ಪರಿಹಾರ ನೀಡಲು ಬದ್ದ ಎಂದರೆ ಸರಿ. ವಾಹನದ ವಿಮೆ ಇರುವುದಾಗಿ ಹೇಳುತ್ತಾರೆ. ನನ್ನ ಪ್ರಮಾಣ ಪತ್ರದ 2 ನೇ ಪುಟದಲ್ಲಿ ಹೇಳಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಅರ್ಜಿದಾರರಿಗೆ ಪರಿಹಾರ ಕೊಡಿಸಬೇಕೆಂದು ಸುಳ್ಳು ಪ್ರಮಾಣ ಪತ್ರ ಸಲಿಲಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಎದುರುದಾರ ಪರ ವಕೀಲರು ಗೈರು ಹಾಜರಾಗಿದ್ದು ಅವರ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ. ಹೇಳಿ. ಕೇಳಿ.ಸರಿ. ಇದೆ

**6** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು